# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು-572 103 ☎:0816 - 2255650,2273511 ಫ್ಯಾಕ್ಸ್:0816-2270719

ಸಂಖ್ಯೆ:ತುವಿ:ಪವಿ:2025-26/707 ದಿನಾಂಕ:05.11.2025

## : ಸುತ್ತೋಲೆ :

ವಿಷಯ : ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಅಧ್ಯಾಪಕರಿಗೆ ಸ್ನಾತಕ ಪರೀಕ್ಷಾ ಮಂಡಳಿಗಳಲ್ಲಿ ಪ್ರಾತಿನಿಧ್ಯ ನೀಡುವ ಕುರಿತು.

ಉಲ್ಲೇಖ: 1. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಅಧ್ಯಾಪಕರುಗಳ ಮನವಿ ಪತ್ರ ದಿನಾಂಕ:27.10.2025

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30.10.2025

* * * * *

ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಉಲ್ಲೇಖ(1) ರಂತೆ ಮನವಿ ಸಲ್ಲಿಸಿ "ಸ್ನಾತಕ ವಿಭಾಗಗಳ ಪರೀಕ್ಷಾ ಮಂಡಳಿಗಳನ್ನು ರಚಿಸುವ ಸಂದರ್ಭದಲ್ಲಿ ಘಟಕ ಕಾಲೇಜುಗಳ ಅಧ್ಯಾಪಕರುಗಳನ್ನು ಪ್ರತಿಯೊಂದು ಮಂಡಳಿಗೂ ಒಬ್ಬರಂತೆ ಅಧಿಕೃತವಾಗಿ ಅಥವಾ ವಿಶ್ವವಿದ್ಯಾನಿಲಯದ ನಾಮ ನಿರ್ದೇಶನವೆಂದು ಪರಿಗಣಿಸಿ ಪ್ರಾತಿನಿಧ್ಯ ನೀಡುವಂತೆ" ಕೋರಿರುತ್ತಾರೆ.

ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಅಧ್ಯಾಪಕರುಗಳ ಮನವಿಯನ್ನು ಪರಿಗಣಿಸಿ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ 2025-26ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ **ಘಟಕ ಕಾಲೇಜುಗಳ ಖಾಯಂ ಅಧ್ಯಾಪಕರುಗಳನ್ನು ವಿಶ್ವವಿದ್ಯಾನಿಲಯದಿಂದ ರಚಿಸಲಾಗುವ ಎಲ್ಲಾ ಸ್ನಾತಕ ವಿಭಾಗಗಳ ಪರೀಕ್ಷಾ ಮಂಡಳಿಗಳಲ್ಲಿ ತಲಾ ಒಬ್ಬರಂತೆ ಜೇಷ್ಠತೆಯನುಸಾರ ರೊಟೇಷನ್ ಆಧಾರದಲ್ಲಿ ವಿಶ್ವವಿದ್ಯಾನಿಲಯದ ನಾಮನಿರ್ದೇಶಿತ ಹೆಚ್ಚುವರಿ ಸದಸ್ಯರೆಂದು ಪರಿಗಣಿಸಿ ಅವಕಾಶ ಕಲ್ಪಿಸಲಾಗಿದೆ.**

ಸದರಿ ಮಾಹಿತಿಯನ್ನು ತಮ್ಮ ಕಾಲೇಜಿನ ಎಲ್ಲಾ ಖಾಯಂ ಅಧ್ಯಾಪಕರ ಗಮನಕ್ಕೆ ತರುವಂತೆ ತಿಳಿಸಲಾಗಿದೆ.

**ಆದೇಶದ ಮೇರೆಗೆ**

5/11/2025

**ಕುಲಸಚಿವರು(ಪರೀಕ್ಷಾಂಗ)**

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. **ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.**
2. **ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು.**

ಪ್ರತಿಗಳು:

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಚೇರಿ ಪ್ರತಿ.